ಹೈಪವರ್ ಕಮಿಟಿ ಮಾಡಿ. ಇದು ಬಡ ರೈತರ, ಸಾಮಾನ್ಯ ರೈತರ ಆಗುಹೋಗುಗಳ ವಿಚಾರವಾದ್ದರಿಂದ ಇದರ ಬಗ್ಗೆಯೂ ಒಂದು ಹೈಪವರ್ ಕಮಿಟಿ ಮಾಡುತ್ತೇವೆಂದು ಹೇಳಿ. ರೈತರ ಪ್ರತಿನಿಧಿಗಳು ಶಾಸಕರ ಪ್ರತಿನಿಧಿಗಳು ಕೂಡಿಕೊಂಡು, ಹೈಪವರ್ ಕಮಿಟಿ ಮಾಡಿ, ಬೆಲೆ ನಿಗದಿ ಮಾಡಿದರೆ ಒಳ್ಳೆಯದು ಪುಗರ್ ಕೇಸ್ ರೇಟ್‌ಗೆ ಸಂಬಂಧಪಟ್ಟಂತೆ ಯಾವರೀತಿ ಹೈಪವರ್ ಕಮಿಟಿ ಮಾಡಿದ್ದೀರೋ ಅದೇ ಪ್ರಕಾರ ಸಣ್ಣ ರೈತರು ಬೆಳೆಯತಕ್ಕಂಥ ತರಕಾರಿಗಳಿಗೂ ಹೈಪವರ್ ಕಮಿಟಿ ಮಾಡಿ ಬೆಲೆ ನಿಗದಿಮಾಡಬೇಕು. ಸರ್ಕಾರ ಇದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರೆ, ಉಪಯೋಗವಾಗುತ್ತದೆ, ಆದುದರಿಂದ ದಯಮಾಡಿ ಇದನ್ನು ಒಪ್ಪಿಕೊಳ್ಳಿ.

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ ಶಂಕರಿಕೊಪ್ಪ ಸಮಿತಿ ಇರುವುದರಿಂದ, ಮತ್ತೆ ಹೈಪವರ್ ಕಮಿಟಿ ಏಕೆ ಬೇಕು?

ಅಧ್ಯಕ್ಷರು.—ಇಲ್ಲಿಗೆ ಈ ವಿಷಯ ಮುಂಕ್ತಾಯವಾಯಿತು. ಈಗ ಬಿಲ್ಸ್ ತೆಗೆದುಕೊಳ್ಳೋಣ.

ಶಾಸನರಚನಾ ಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿ) :— ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ರಾಷ್ಟ್ರದಲ್ಲಿ, ರಾಜ್ಯದಲ್ಲಿ, ಧಾರ್ಮಿಕ ಸಂಸ್ಥೆಗಳ ಕಟ್ಟಡಗಳ ಬಗ್ಗೆ ಅನೇಕ ಸಲ ವಿವಾದಗಳು ಉಂಟಾಗಿ, ಮತೀಯ ಅಶಾಂತಿ ಉಂಟಾಗಿ, ಕಾನೂನು ವ್ಯವಸ್ಥೆ ಕೂಡ ಭಂಗ ಬರತಕ್ಕಂಥ ಅನೇಕ ಘಟನೆಗಳು ನಡೆದಿವೆ. ಈ ಕಾರಣದಿಂದ, ಕೇಂದ್ರ ಸರಕಾರದವರು, ನ್ಯಾಷನಲ್ ಇಂಟಿಗ್ರೇಷನ್ ಕಮಿಟಿಯಲ್ಲಿ ಮಾಡಿದ ನಿರ್ಣಯದ ಪ್ರಕಾರ ರಾಜ್ಯ ಸರಕಾರಗಳು ಈ ಬಗ್ಗೆ ಒಂದು ಕಾನೂನನ್ನು ಮಾಡಬೇಕು ಎಂದು ಹೇಳಿ ನಮಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಮಗೆ ತಿಳಿಸಿದ್ದಾರೆ. ಈಗಾಗಲೇ ರಾಜ್ಯಾಸ್ಥಾನದಲ್ಲಿ ಇಂತಹ ಒಂದು ಕಾನೂನು ಜಾರಿಯಲ್ಲಿದೆ. ಅದರ ಆಧಾರದ ಮೇಲೆ, ಕೇಂದ್ರ ಸರಕಾರದ ಒಂದು ಸಲಹೆಯ ಮೇರೆಗೆ ಈ ಒಂದು ಮಸೂದೆಯನ್ನು ತಂದಿದ್ದೇವೆ. ಎಲ್ಲೆಲ್ಲಿ ಈ ಧಾರ್ಮಿಕ ಸಂಸ್ಥೆಗಳನ್ನು ಕಟ್ಟತಕ್ಕಂಥ ಸಂದರ್ಭದಲ್ಲಿ, ಮಠಗಳನ್ನಾಗಲೀ, ಮಸೀದಿಗಳನ್ನಾಗಲೀ, ಗುಡಿಗಳನ್ನಾಗಲೀ, ಚರ್ಚ್‌ಗಳನ್ನಾಗಲೀ, ಕಟ್ಟತಕ್ಕಂಥ ವಿಚಾರದಲ್ಲಿ ಡೆಪ್ಯುಟಿ ಕಮಿಷನರ್‌ರವರ ಅಪ್ಪಣೆ ಪಡೆದು ಕಟ್ಟಬೇಕು. ಅವರ ಅಪ್ಪಣೆ ಪಡೆಯದೇ ಅನೇಕ ಕಡೆ ಬೇರೆ ಬೇರೆ ಧರ್ಮದವರು ತಮ್ಮ ಧಾರ್ಮಿಕ ಕಟ್ಟಡಗಳನ್ನು ಕಟ್ಟತಕ್ಕಂಥ ಸಂದರ್ಭದಲ್ಲಿ ಸಾರ್ವಜನಿಕ ಉದ್ವೇಗ ಆಗತಕ್ಕಂಥ ಸಂಭವ ಇರುತ್ತದೆ. ಇದೊಂದು ಸರಳವಾದಂಥ ಕಾನೂನು. ಡೆಪ್ಯುಟಿ ಕಮಿಷನರ್‌ರವರ ಅಪ್ಪಣೆಯನ್ನು ಪಡೆದು ಇದನ್ನು ಮಾಡತಕ್ಕ ಬಗ್ಗೆ ಮಾತ್ರ ಇದರಲ್ಲಿ ಹೇಳಿದ್ದೇವೆ. ಇದು ಬಹಳ ಅವಶ್ಯ ಇದೆ. ಕಾರಣ ಏನೆಂದರೆ, ಇತ್ತೀಚೆಗೆ ಎಲ್ಲಾ ಜಾಗದಲ್ಲಿ, ಸರಕಾರಿ ಜಾಗದಲ್ಲೇ ಇರಲಿ, ಖಾಸಗಿ ಜಾಗದಲ್ಲೇ ಇರಲಿ, ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಒಳಪಟ್ಟ ಜಾಗಗಳಲ್ಲೂ ಕೂಡಾ, ರಸ್ತೆಗಳ ಪಕ್ಕಕ್ಕೇ ಅನೇಕ ಸಲ ಇಂತಹ ಕಟ್ಟಡಗಳು ಬರುತ್ತವೆ, ಅದುದರಿಂದ ನಾನು ಈಗಾಗಲೇ ಹೇಳಿದಂತೆ ಸಾರ್ವಜನಿಕ ಶಾಂತಿಗೆ ಭಂಗ ಬರತಕ್ಕಂಥ ಒಂದು ಪ್ರಸಂಗಗಳು ಬರುತ್ತವೆ. ಅದನ್ನು ತಪ್ಪಿಸುವುದಕ್ಕಾಗಿ ಈ ಕಾನೂನು ಮಾಡಬೇಕೆಂದು ಹೇಳಿದ್ದಾರೆ, ಕೇಂದ್ರ ಸರಕಾರದ ಒಂದು ಮಾಡೆಲ್ ಬಿಲ್ ಮತ್ತು ರಾಜಾಸ್ಥಾನದಲ್ಲಿ ಈ ಬಗ್ಗೆ ಈಗಾಗಲೇ ಬಂದಿರತಕ್ಕಂಥ ಕಾಯಿದೆಯ ಮೇಲೆ ಆಧರಿಸಿ ಈ ಬಿಲ್ ತಂದಿದ್ದೇವೆ. ಆದ್ದರಿಂದ ಇದಕ್ಕೆ ಸಭೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.—ಈ ಬಿಲ್ ಕಾಪಿ ನಮಗೆ ಸಪ್ಲೈ ಆಗಿಲ್ಲ.

ಅಧ್ಯಕ್ಷರು.—ಸ್ವಾಮಿ ಇದನ್ನು ನೀವು ನೋಡಿರಲಿಕ್ಕಿಲ್ಲ, ಇದನ್ನು ತಮಗೆಲ್ಲಾ ಕೊಟ್ಟಿದ್ದೇವೆ.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ. ಇವತ್ತು ಬೆಳಗ್ಗೆ ೧೧ ಘಂಟೆಗೆ, ಮಂಡಲ ಪಂಚಾಯತಿಗಳಿಗೆ ಹಿಂದಂಳಿದವರ್ಗದವರನ್ನು ನಾಮಕರಣ ಮಾಡುವ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿತ್ತು ಬಿಲ್‌ಗಳನ್ನು ತೆಗೆದು ಕೊಳ್ಳುವುದು ಇರಲಿಲ್ಲ. ನವ್ಯ ಕಾರ್ಯಕ್ರಮದ ಪ್ರಕಾರ ಬಿಲ್ ಇರಲಿಲ್ಲ ಆದುದರಿಂದ ಬಿಲ್‌ಗಳನ್ನು ದಯವಿಟ್ಟು ಇನ್ನೊಂದು ದಿವಸ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸರಳವಾದ ಮಸೂದೆ...

ಶ್ರೀ ಎಂ. ವೀರಪ್ಪ ಮೊಯಿಲಿ. —ಸರಳವಾದುದೇನಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯು ನಮಗೆ ಗೊತ್ತಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ.—ಹಾವು ಚೇಳು ಎಲ್ಲಾ ಇದರಲ್ಲಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರಕಾರದ ಮಾಡೆಲ್ ಬಿಲ್ ಆಧಾರದ ಮೇಲೆ ಇದನ್ನು ತಂದಿದ್ದೇವೆ. ಕೇಂದ್ರ ಸರಕಾರದವರಂ ಬರೆದ ಪತ್ರ ಇಲ್ಲಿದೆ. ಅದನ್ನೂ ಕೂಡಾ ಓದುತ್ತೇನೆ ಇದನ್ನು ಯಾವ ಆಧಾರದ ಮೇಲೆ ಮಾಡಿದ್ದೇವೆ ಎಂಬುದನ್ನು ನಿಮಗೆ ಹೇಳುತ್ತೇನೆ.

ಅಧ್ಯಕ್ಷರು.—ಓದಲಿ, ಓದಿ ಹೇಳಲಿ, ಮಾಡೆಲ್ ಇದೆ, ಇದರಲ್ಲಿ ಯಾವ ಕಾಂಪ್ಲಿಕೇಟೆಡ್ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಸೂದೆಯ ಪ್ರತಿಗಳನ್ನು ಎಲ್ಲರಿಗೂ ಕೊಟ್ಟಿದ್ದೇವೆ. ಕಳೆದ ಅಧಿವೇಶನಲ್ಲೇ ಇದು ಇಂಟ್ರಡ್ಯೂಸ್ ಆಗಿದೆ.

ಅಧ್ಯಕ್ಷರು.—ವೀರಪ್ಪ ಮೊಯಿಲಿಯವರೇ, ಇದರ ಮೇಲೆ ಮಾತನಾಡಿ ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಇದನ್ನು ಸ್ಟಡಿ ಮಾಡಿದ್ದೇನೆ. ಮಾನ್ಯ ಸಚಿವರು ಹೇಳಿದಂತೆ ಇದು ಸುಲಭವಾದ ಬಿಲ್ ಅಲ್ಲ. ಒಂದು ರೀತಿಯಲ್ಲಿ ಇದರ ಪರಿಣಾಮ ಏನಾಗುತ್ತದೆ ಎಂದು ಹೇಳಿದರೆ. ಮುಂದೆ ಯಾವುದೇ ಧಾರ್ಮಿಕ ಸಂಸ್ಥೆಗಳು ಯಾವುದೇ ಸಭೆಗಳನ್ನು ನಡೆಸ ಬೇಕಾದರೂ ಕೂಡಾ ಸರಕಾರದಿಂದ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭೆಗಳ ಪಿಚ್ಚರ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—It may affect even the very secular concept. ಕಳೆದಬಾರಿ ಬಿಲ್ ಇಂಟ್ರಡ್ಯೂಸ್ ಆಗುವಾಗಲೇ ನಾವು ಇದರ ಬಗ್ಗೆ ಪ್ರಸ್ತಾವನೆಯನ್ನು ಮಾಡಿರುತ್ತೇನೆ. ಇದು ಬೆ ಕಾವರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಲಿ. ಏಕೆಂದರೆ ಇದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಕಮ್ಯುನಲ್ ಇಂಟಿಗ್ರೇಷನ್ ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದರೂ ಕೂಡಾ, ಮುಂದೆ ಇದರಿಂದ ಅನೇಕ ಸಮಸ್ಯೆಗಳು ಉಲ್ಬಣವಾಗತಕ್ಕಂಥ ಪರಿಸ್ಥಿತಿ ಬರಬಹುದು, ಹಾಗೂ ಈ ಮಸೂದೆಯನ್ನು ಅನುಷ್ಠಾನ ಮಾಡಲಿಕ್ಕೆ ಹೋಗುವಾಗ ಅನೇಕ ರೀತಿಯ ತೊಂದರೆಗಳಾಗಬಹುದು. ಕಮ್ಯುನಲ್ ಫ್ಯಾಕ್ಟರ್‌ಗಳು ಜಾಸ್ತಿಯಾಗಬಹುದು. This is my impression after going through the Bill. Not that we have not gone through the Bill ಇದನ್ನು ಮೊನ್ನೆ, ಕಳೆದಬಾರಿ ಈ ಬಿಲ್ ಬಂದಾಗಲೂ ಕೂಡಾ ಪ್ರಸ್ತಾಪ ಮಾಡಿದ್ದೇನೆ ಆದುದರಿಂದ ಇದನ್ನು ತಾವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುವುದು ಬಹಳ ಒಳ್ಳೆಯದು.

ಏಕೆಂದರೆ ಈ ವಿಚಾರ ಅತ್ಯಂತ ಗಹನವಾದುದು. ವಿರೋಧಪಕ್ಷದ ಕೆಲವು ಸದಸ್ಯರೊಂದಿಗೆ ಸವಾಲೋಚನೆ ಮಾಡಿ ಸಂಬಂಧಪಟ್ಟ ಪ್ರತಿನಿಧಿಗಳನ್ನು ಹಾಗೂ ಸಾರ್ವಜನಿಕ ಪ್ರತಿನಿಧಿಗಳನ್ನು ಕರೆದು ಅವರೊಡನೆ ಸನ್ಮಾನ್ಯ ಸಚಿವರು ವಿಚಾರ ವಿನಿಮಯ ಮಾಡಿ, ಈ ಮಸೂದೆಯನ್ನು ಇಲ್ಲಿ ತರುವುದು ಸೂಕ್ತ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಹೇಳುವುದನ್ನು ನಾನು ಒಪ್ಪುತ್ತೇನೆ. ಇದು ಮಹತ್ವವಾದ ಮಸೂದೆ, ಚರ್ಚೆಯಾಗಬೇಕು. ಅಭಿಪ್ರಾಯಗಳು ಹೊರಕ್ಕೆ ಬರಬೇಕು. ಚರ್ಚೆ ಇಲ್ಲದೆ ಪಾಸ್ ಆಗತಕ್ಕಂಥ ಮಸೂದೆ ಇದಲ್ಲ. ಧಾರ್ಮಿಕ ಭಾವನೆಗಳ ಬಗ್ಗೆ, ಸೂಕ್ಷ್ಮವಾಗಿ, ಸರ್ಕಾರದ ನಿಲುವನ್ನು ಈಗಾಗಲೇ ನ್ಯಾಷನಲ್ ಇಂಟಿಗ್ರೇಷನ್ ಕಮಿಟಿಯಲ್ಲಿ ಚರ್ಚೆ ಮಾಡಿದ್ದಾರೆ. ಆ ಕಮಿಟಿಯಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಇದ್ದು, ಪ್ರಧಾನಿಯವರು ಅಧ್ಯಕ್ಷರಾಗಿರತಕ್ಕಂಥ ಕಮಿಟಿ ಅದು. ಆದರ ಆಧಾರದ ಮೇಲೆ ಕೇಂದ್ರಸರ್ಕಾರದಿಂದ ಒಂದು ಪತ್ರ ಬಂದಿದೆ. ಚರ್ಚೆ ಜೊತೆಗೆ ವಿರೋಧಪಕ್ಷದ ಸದಸ್ಯರನ್ನೂ ಕರೆದು. ಮತ್ತೆ ಬೇರೆ ಬೇರೆ ಪಕ್ಷಗಳ ಸದಸ್ಯರನ್ನು ಕರೆದು ಚರ್ಚೆ ಮಾಡೋಣ. ಇದು ಪಾಸ್ ಆಗುವುದಕ್ಕೆ ಮೊದಲೇ ಚರ್ಚೆ ಮಾಡೋಣ. ಎಲ್ಲರೂ ಅಭಿಪ್ರಾಯಪಟ್ಟರೆ, ತಿದ್ದುಪಡಿ ಮಾಡಿಕೊಳ್ಳುವುದಕ್ಕೂ ಒಪ್ಪೋಣ. ಇವತ್ತು ಚರ್ಚೆ ಬೇಡ ಎಂದು ಹೇಳಿದ್ದೀರಿ ಆದ್ದರಿಂದ ಇದನ್ನು ಮುಂದಕ್ಕೆ ಹಾಕೋಣ.

ಶ್ರೀ ಬಿ. ಎ. ಇದಿನಬ್ಬ ರಾಜಾಸ್ಥಾನದಲ್ಲಿ ಒಂದು ಕಡೆ ಇರಬಹುದು. ಇನ್ನುಳಿದ ೧೯ ಸಂಸ್ಥಾನಗಳಲ್ಲಿ, ಒಂದೊಂದು ಸಂಸ್ಥಾನದಲ್ಲಿ ಒಂದೊಂದು ರೀತಿಯ ಧಾರ್ಮಿಕ ಭಾವನೆಗಳು ಇರುವುದರಿಂದ. ಇದರ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಈಗ ಮಂಡಲ್ ಪಂಚಾಯ್ತಿಗಳಿಗೆ ನಾಮಿನೇಷನ್ ಮಾಡುವ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಶ್ರೀಮತಿ ನಾಗರತ್ನಮ್ಮನವರೇ, ತಾವು ಚರ್ಚೆ ಪ್ರಾರಂಭ ಮಾಡಿ.

ಅಲ್ಪ ಕಾಲಾವಧಿ ಚರ್ಚೆ

ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗೆ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವ ಬಗ್ಗೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದು ದ.ರಾದೃಷ್ಟ ಏಕೆಂದರೆ, ನಮ್ಮ ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚೆ ಮುಖ್ಯಮಂತ್ರಿಗಳು ಬರುತ್ತಾರೆಂದು ನನಗೆ ನಂಬಿಕೆ ಇತ್ತು ಆದರೆ ಈಗ ಏನಾಗಿದೆ.....

ಅಧ್ಯಕ್ಷರು.—ಈಗ ಮಂಡಲ್ ಪಂಚಾಯ್ತಿಗಳಿಗೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ ೨೬ನೇ ಮಾರ್ಚ್ ೧೯೮೭ರಂದು ಹೊರಡಿಸಲಾದ ಆರ್‌ಡಿಪಿ ಳಳ ಜಡ್‌ಪಿಎಸ್ ೮೭ನೇ ಕ್ರಮಾಂಕದ ಅಧಿಸೂಚನೆಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿ ಇದ್ದರೆ ಸ್ವಲ್ಪ ಸಮಾಧಾನವಾಗುತ್ತಿತ್ತು ಏಕೆಂದರೆ, ನಮ್ಮ ಸಕಲ ವಿದ್ಯಾಪ್ರವೀಣರಾದ ಶ್ರೀ ಲಕ್ಷ್ಮೀಸಾಗರ್ ಎದುರಿಗೆ ನಾವು ಏನು ಹೇಳಿಕೊಂಡರೂ ಅದು 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ" ಎಂಬಂತಾಗುತ್ತದೆ. ಅವರಿಗೆ ಕೊಡುವುದೂ ಬರುವುದಿಲ್ಲ, ತೆಗೆದುಕೊಳ್ಳುವುದೂ ಬರುವುದಿಲ್ಲ ಆಮೇಲೆ ಇನ್ನೊಬ್ಬರು ಇದ್ದಾರೆ, ಅವರು ಕಿವಿ ಮೇಲೆ ಹಾಕಿಕೊಳ್ಳುವುದೇ ಇಲ್ಲ ಈ ಜನರ ಮುಂದೆ ಚರ್ಚೆ ಮಾಡುವಂತ ದುರಾದೃಷ್ಟ ನಮಗೆ ಬಂದಿದೆ ಮಂಡಲ್ ಪಂಚಾಯ್ತಿ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ನಡೆಸುವಾಗ ಇದನ್ನು ತಡೆಹಿಡಿಯುವುದರ ಬಗ್ಗೆ ನಾವು ಚರ್ಚೆಮಾಡಬೇಕೆಂಬ ನಿಲುವಳಿ ಸೂಚನೆಯನ್ನು ಮುಂಡಿಸಿ, ಅದರ ಚರ್ಚೆಗೆ ತಮ್ಮ ಪರ್ಮಿಷನ್ ಕೇಳುತ್ತಿದ್ದ ಸಮಯದಲ್ಲಿ ಈ ವಿಷಯ ಚರ್ಚೆಗೆ ಬರಕೂಡದೆಂದು ಕೆಲವು ಸದಸ್ಯರು ತಡೆ ಹಿಡಿಯುವುದಕ್ಕೆ ಮಾಡಿದ ಪ್ರಯತ್ನ. ಅನಂತರ ಉದ್ಭವಿಸಿದ ದುರ್ಘಟನೆ ಬಗ್ಗೆ ತಿರುಗಿ ಹೇಳುವುದು ಅಷ್ಟು ಸಮಂಜಸವಲ್ಲ ಹಾಗೂ ಅದರ ಅವಶ್ಯಕತೆ ಈಗ ಇಲ್ಲ. ಅಧ್ಯಕ್ಷರೇ, ಸರ್ಕಾರದವರು ಬಹಳ ಖಚಿತವಾಗಿ ನಿಸಂಕೋಚವಾಗಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಆಕ್ಟನ್ನು "Yes, this is a political Act. We are going to carry it out whether you like it or not" ನೀವು ಬೇಕಾದರೆ ಒಪ್ಪಿಕೊಳ್ಳಿ ಅಥವಾ ಬಿಡಿ ನಾವಂತೂ ನಡೆಸಿಕೊಂಡು ಹೋಗುತ್ತೇವೆ. "This is a Political Act" ಎಂದು ನಿಸ್ಸಂಕೋಚವಾಗಿ ಹೇಳಿದ್ದಾರೆ ಇದು ಆಕ್ಟ್ ಆಗುವಾಗಲೇ ಎಷ್ಟೋ ಡಿಸ್ಕಷನ್ ಆಯಿತು ಜಾಯಿಂಟ್ ಸೆಲೆಕ್ಟ್ ಕಮಿಟಿಗೂ